ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ 140/2015

ಚಾಸಾ - 8 ಫ್ರಾಸಾ- 4 ದಿನಾಂಕ 05.03.2020

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | : | ನಂಜೇಶ್ ಕೆ.ಪಿ |
| ತಂದೆಯ ಹೆಸರು | : | ಲೇಟ್ ಪುಟ್ಟಸ್ವಾಮಿಗೌಡ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಸಬ್ ರಿಜಿಸ್ಟರ್, ಮೂಡಬಿದರೆ. |
| ವಾಸ | : | ಮೂಡಬಿದರೆ. |

**ಮುಖ್ಯ ವಿಚಾರಣೆಃ ಸರ್ಕಾರದ ಪರ ಸ್ಪೆಷಲ್ ಪಿಪಿ ರವರಿಂದಃ**

ನಾನು 2011 ರಿಂದ 2014 ಸಾಲಿನ ರವರೆಗೆ ಹಾಸನದ ಉಪನೋಂದಣಿ ಕಚೇರಿಯಲ್ಲಿ ಉಪನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ- **20-08-2013** ರಂದು ಹಾಸನದ ಲೋಕಾಯುಕ್ತ ಪೊಲೀಸ್ ಕಚೇರಿಯಿಂದ ಒಂದು ಪತ್ರ ನಮ್ಮ ಕಚೇರಿಗೆ ಬಂದಿತ್ತು ಸದರಿ ಪತ್ರದಲ್ಲಿ ಮಂಜುನಾಥ್‌ರವರ ನಿವೇಶನಕ್ಕೆ ಸಂಬಂಧಪಟ್ಟಂತೆ, ಮುದ್ರಾಂಕ ಶುಲ್ಕ **(Stamp duty)** ಮತ್ತು ನೋಂದಣಿ ಶುಲ್ಕದ ಮಾಹಿತಿಯನ್ನು ಕೇಳಿದ್ದರು. ನಾನು ನಮ್ಮ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿ ಮಂಜುನಾಥರವರ ನಿವೇಶನಕ್ಕೆ ಸಂಬಂಧಪಟ್ಟಂತೆ, ದಸ್ತಾವೇಜನ್ನು **(Documents)** ಅಂದರೆ **3** ಕ್ರಯಪತ್ರಗಳನ್ನು ದಿಃ **17-09-2013** ರಂದು ಹಾಸನದ ಲೋಕಾಯುಕ್ತ ಕಚೇರಿಗೆ ಕಳುಹಿಸಿದ್ದೇನೆ.

3. ಸದರಿ ಕ್ರಯಪತ್ರಗಳನ್ನು ನೋಡಿದೆನು. ಸದರಿ ಕ್ರಯಪತ್ರಗಳನ್ನು ನಾನು ಕವರಿಂಗ್ ಲೆಟರ್ ಸಮೇತ ಕಳುಹಿಸಿದ್ದೇನೆ. ದಿಃ- **17-09-2013** ರ ಕವರಿಂಗ್ ಲೆಟರನ್ನು ನಿಶಾನೆ ಪಿ-**66** ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನೋಡಿದೆ. ಅದು ನನ್ನ ಸಹಿ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-**66**(ಎ) ಎಂದು ಗುರುತಿಸಲಾಯಿತು.

4. ದಿಃ- **27-08-2005** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಶಾನೆ ಪಿ **-67** ಎಂದು ಗುರುತಿಸಲಾಯಿತು. ದಿಃ- **16-09-2005** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಶಾನೆ ಪಿ-**68** ಎಂದು ಗುರುತಿಸಲಾಯಿತು. ದಿಃ- **04-12-2010** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಶಾನೆ ಪಿ **-69** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿಯ ಪರ ಶ್ರೀ ಸಿ.ಎನ್.ವಿ ವಕೀಲರಿಂದಃ-</u>

ಶ್ರೀ ಸಿ.ಎನ್.ವಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

***ಓ.ಹೇ.ಕೇ.ಸ.ಇದೆ.***

***ಪ್ರಧಾನ ಜಿಲ್ಲಾ*** *ಮತ್ತು ಸೆಷನ್ಸ್ ಹಾಗೂ ಸ್ಪೆಷಲ್*
***ನ್ಯಾಯಾಧೀಶರು, ಹಾಸನ.***